

## ಪುರಾಣದಲ್ಲೂ ಐತಿಹ್ಯ

**ಭಾರತೀಯ ಪರಂಪರೆಯಲ್ಲಿ ದಾನಕ್ಕೆ ವಿಶಿಷ್ಟ ಸ್ಥಾನವಿದೆ. ಯಾರಿಗೆ ಯಾವುದರ ಅಗತ್ಯವಿರುತ್ತದೋ ಅದನ್ನು ನಿಸ್ವಾರ್ಥತೆಯಿಂದ ನೀಡುವುದೇ ದಾನ. ನಮ್ಮ ಪುರಾಣ ಪುಣ್ಯಕಥೆಗಳಲ್ಲಿ ಅಂಗದಾನ ಮತ್ತು ಅಂಗ ಬದಲಾವಣೆಯ ಕುರಿತು ಅನೇಕ ಉಲ್ಲೇಖಗಳಿವೆ. ಬೇಡರ ಕಣ್ಣಪ್ಪನ ಕಥೆ, ಗಣೇಶನಿಗೆ ಆನೆಯ ಮುಖ ಜೋಡಣೆ ಕಥೆಗಳಾದರೂ ವೈದ್ಯ ವಿಜ್ಞಾನದ ಬೆಳವಣಿಗೆಗೆ ಪ್ರೇರಕ. ದದೀಚಿ ಮಹರ್ಷಿ ಲೋಕಕಲ್ಯಾಣಕ್ಕಾಗಿ ತನ್ನ ಬೆನ್ನು ಮೂಳೆಯನ್ನು ಇಂದ್ರನಿಗೆ ದಾನ ಮಾಡಿದ್ದನಂತೆ.**

ತಿಳಿಸಲಾಗುವುದು. ಇಂತಹ ವ್ಯಕ್ತಿಯಿಂದ ಬಹು ಅಂಗಾಂಗ ದಾನ ಸಾಧ್ಯ; ಅದೂ ಸಂಬಂಧಿಕರು ಒಪ್ಪಿಗೆ ನೀಡಿದರೆ ಮಾತ್ರ.

ಅಂಗ ಮರು ಜೋಡಣೆಯಲ್ಲಾದ ಯಶಸ್ಸು ಅಂಗ ಮಾರಾಟಕ್ಕೆ ಪ್ರಚೋದನೆ ನೀಡಿದ್ದು ದುರಂತದ ವಿಷಯ. ಅದನ್ನು ನಿಯಂತ್ರಿಸಲಿಕ್ಕಾಗಿ 1994 ರಲ್ಲಿ ಮಾನವ ಅಂಗಾಂಗ ಕಸಿ ಕಾಯಿದೆ ಕೇಂದ್ರ ಸರಕಾರದಿಂದ ಜಾರಿಯಾದ ಕಾನೂನು. ಅವಶ್ಯಕತೆಗೆ ಅನುಗುಣವಾಗಿ ಅವುಗಳಲ್ಲಿ ಬದಲಾಣೆಗಳನ್ನು ಕಾಲ ಕಾಲಕ್ಕೆ ಮಾಡಲಾಗಿದೆ. ತಂದೆ, ತಾಯಿ, ಸಹೋದರ, ಸಹೋದರಿ, ಮಗ, ಮಗಳು, ಗಂಡ, ಹೆಂಡತಿ, ಅಜ್ಜ, ಅಜ್ಜಿ, ಮೊಮ್ಮಗ, ಮೊಮ್ಮಗಳು ಅಂಗ ದಾನ ಮಾಡಬಹುದು. ಅಂಗಕಸಿ ಅವಶ್ಯಕತೆ ಇರುವವರು 'ಟ್ರಾನ್ಸ್‌ಪ್ಲಾಂಟ್ ರಿಜಿಸ್ಟರ್'ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಸರ್ಕಾರದ 'ಜೀವನ ಸಾರ್ಥಕತೆ' ಯೋಜನೆ ಸಂಪೂರ್ಣ ಅಂಗಾಂಗ ದಾನಕ್ಕೇ ಸಂಬಂಧಿಸಿದ್ದು, ಇಲ್ಲಿ ಟ್ರಾನ್ಸ್‌ಪ್ಲಾಂಟ್ ಮಾಡುವ ಆಸ್ಪತ್ರೆಗಳೂ ಸಹ ನೋಂದಾಯಿಸಿ ಪರವಾನಿಗೆ ಪಡೆಯಬೇಕಾಗುತ್ತದೆ.

ಮಾನವ ಅಂಗಾಂಗಗಳ ಸಂರಕ್ಷಣೆ, ಅಂಗಾಂಗಗಳನ್ನು ತೆಗೆಯುವುದು ಮತ್ತು ಕಸಿ ಮಾಡುವುದರ ಮೇಲಿನ ನಿರ್ಬಂಧಗಳು, ಅಂಗಾಂಗಗಳನ್ನು ತೆಗೆಯುವ, ಸಂರಕ್ಷಿಸುವ ಅಥವಾ ಕಸಿ ಮಾಡುವ ಆಸ್ಪತ್ರೆಗಳ ನಿಯಂತ್ರಣ, ಅಂಗಾಂಗಗಳನ್ನು ವೈದ್ಯಕೀಯ ಉದ್ದೇಶವನ್ನು ಹೊರತುಪಡಿಸಿ ಬೇರೆ ಉದ್ದೇಶಗಳಿಗಾಗಿ ತೆಗೆಯುವುದು ಅಥವಾ ಕಸಿ ಮಾಡುವುದರ ನಿಷೇಧ, ದಾನಿಗೆ ಮತ್ತು ಸ್ವೀಕರಿಸುವವರಿಗೆ ತಿಳಿಸಬೇಕಾದ ವಿವರಣೆಗಳು ಮತ್ತು ಪರಿಣಾಮಗಳು, ಅಪರಾಧಗಳು ಮತ್ತು ದಂಡಗಳ ಕುರಿತು ಸಮಗ್ರ ಮಾಹಿತಿ ಅಂಗಾಂಗ ಕಸಿ ಕಾಯಿದೆಯಲ್ಲಿದೆ. ಕರ್ನಾಟಕ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಜೀವನ ಸಾರ್ಥಕತೆ' ಅಂತರ್ಜಾಲದಲ್ಲಿ ಇದರ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗಿದೆ. ವೈದ್ಯ ವಿಜ್ಞಾನ ಮುಂದುವರೆದಿದ್ದರೂ ಅಂಗ ಕಸಿ ಮಾಡುವ ವಿಧಾನಗಳಲ್ಲಿ ಇನ್ನೂ ಬೆಳವಣಿಗೆಯಾಗಿಲ್ಲ. ರೋಗಿಯ ದೇಹದ ಅಂಗದ ಕಾರ್ಯಕ್ಷಮತೆ ಕಡಿಮೆಯಾಗಿ ಬದಲಾವಣೆಯ ಅವಶ್ಯಕತೆಯಿದ್ದಲ್ಲಿ ದಾನಿಗಳನ್ನು ಅವಲಂಬಿಸಬೇಕಾಗುತ್ತದೆ. ಅಂಗಗಳ ಅವಶ್ಯಕತೆ ಮತ್ತು ಪೂರೈಕೆಯಲ್ಲಿ ಅಜಗಜಾಂತರ ವ್ಯತ್ಯಾಸವಿದ್ದು ಅಂಗದಾನದ ಕುರಿತು ಅರಿವನ್ನು ಮೂಡಿಸುವುದು ಅತಿ ಅವಶ್ಯಕವಾಗಿದೆ. ಉದಾಹರಣೆಗೆ ಭಾರತದಲ್ಲಿ 15 ದಶಲಕ್ಷ ಜನ ಅಂಧತ್ವದಿಂದ ಬಳಲುತ್ತಿದ್ದಾರೆ. ಇದರಲ್ಲಿ 10 ದಶಲಕ್ಷ ಅಂಧರಿಗೆ ಕಾರ್ನಿಯಾ ಮರುಜೋಡಣೆಯ ಮೂಲಕ ಅಂಧತ್ವವನ್ನು ನಿವಾರಿಸಬಹುದು. ಆದರೆ ಮರಣೋತ್ತರ ಕಣ್ಣುಗಳ ದಾನ ಅತ್ಯಂತ ಕಡಿಮೆ ಇದ್ದು ಅವಶ್ಯಕತೆ ಮತ್ತು ಪೂರೈಕೆಯಲ್ಲಿ ಬಹು ದೊಡ್ಡ ವ್ಯತ್ಯಾಸವಿದೆ. ಇದನ್ನು ಅಂಗದಾನದ ಜಾಗೃತಿಯ ಮೂಲಕ ಪರಿಹರಿಸಬಹುದು.

ಅಂಗದಾನದ ಮೂಲಕ ಅಂಧತ್ವದಿಂದ ಕತ್ತಲೆಯಲ್ಲಿರುವವರಿಗೆ ಪುನಃ ಜಗತ್ತನ್ನು ನೋಡುವ ಹಾಗೆ ಮಾಡಬಹುದು. ಮರಣದ ಅಂಚಿನಲ್ಲಿರುವವರಿಗೆ ಮರುಜನ್ಮ ನೀಡಬಹುದು.

### ಇತಿಹಾಸದ ಪುಟ ತಿರುವಿದಾಗ...

ಚೀನಾದ ವೈದ್ಯಕೀಯ ಇತಿಹಾಸದಲ್ಲಿ ಮುಖ್ಯವಾಗಿ ಪಿಯನ್ ಚಿಯೋ ಎಂಬವರು ಹೃದಯ ಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡಿದ್ದರು. ರೋಮನ್ ಕ್ಯಾಥೊಲಿಕ್ ಬರವಣಿಗೆಯ ಪ್ರಕಾರ 3ನೇ ಶತಮಾನದಲ್ಲಿ ಸಂತರಾದ ಡಾಮಿಯನ್ ಮತ್ತು ಕಾಸ್ಮೊಸ್‌ರವರು ಜಸ್ಟಿಯನ್‌ನ ಕೊಳೆತ ಕಾಲನ್ನು ತೆಗೆದು ಮರಣ ಹೊಂದಿದ ಇತಿಯೊಪೊಯನ್‌ನ ಕಾಲನ್ನು ಜೋಡಿಸಿದ್ದರಂತೆ. ಭಾರತದ ಶಸ್ತ್ರಚಿಕಿತ್ಸೆಯ ಪಿತಾಮಹ ಸುಶ್ರುತ ಮೂಗನ್ನು ಸರಿಪಡಿಸಲು ಕ್ರಿ.ಪೂ. ಎರಡನೇ ಶತಮಾನದಲ್ಲಿ ರೋಗಿಯ ಸ್ವಂತ ಚರ್ಮವನ್ನು ಬಳಸಿದ್ದರಂತೆ. 16ನೇ ಶತಮಾನದಲ್ಲಿ ಇಟಲಿಯ ಗಾಸ್ಪರೋ ಚರ್ಮ ಬದಲಾವಣೆಗೆ ಹೆಸರುವಾಸಿಯಾಗಿದ್ದರಂತೆ. 1905ರಲ್ಲಿ ಪ್ರಪ್ರಥಮ ಕಣ್ಣಿನ ಕಾರ್ನಿಯಾದ ಬದಲಾವಣೆಯನ್ನು ಯಶಸ್ವಿಯಾಗಿ ಝೆಕ್ ರಿಪಬ್ಲಿಕ್‌ನಲ್ಲಿ ಮಾಡಲಾಯಿತು. ಅಲೆಕ್ಸಿಸ್ ಕಾರೆಲ ಮತ್ತು ಚಾರ್ಲೆಸ ಗುತ್ರಿಯವರ ರಕ್ತ ನಾಳಗಳ ಮರುಜೋಡಣೆ ಶಸ್ತ್ರಚಿಕಿತ್ಸೆಗಳು ಈ ಶಸ್ತ್ರಚಿಕಿತ್ಸೆ ಬೆಳೆಯುವಲ್ಲಿ ಮಹತ್ತ ಪಾತ್ರ ವಹಿಸಿವೆ. 1912ರ ನೊಬೆಲ್ ಪಾರಿತೋಷಕವನ್ನು ಕಾರೆಲ್‌ರವರಿಗೆ ನೀಡಿ ಗೌರವಿಸಲಾಗಿದೆ.

ಜೀವಂತವಿರುವಾಗ ಒಂದು ಮೂತ್ರಕೋಶವನ್ನು, ಶ್ವಾಸಕೋಶದ ಭಾಗವನ್ನು, ಯಕೃತ್ತಿನ ಭಾಗವನ್ನು, ಸಣ್ಣ ಕರುಳಿನ ಭಾಗವನ್ನು ದಾನ ಮಾಡಬಹುದು. ಹಲವು ಅಂಗಾಂಶಗಳನ್ನು ಮರಣೋತ್ತರ ಅನೇಕ ವರ್ಷಗಳವರೆಗೆ ಸಂಗ್ರಹಿಸಿಡಬಹುದು.

(ಲೇಖಕರು ರಾಯಚೂರಿನ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥರು.
ಸಂಪರ್ಕ: 9448139339)

